# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 1250 |
| 2. ಸದಸ್ಯರ ಹೆಸರು | : | ಶ್ರೀ ಗೋವಿಂದ ರಾಜು |
| 3. ಉತ್ತರಿಸಬೇಕಾದ ದಿನಾಂಕ | : | 29-12-2022 |
| 4. ಉತ್ತರಿಸುವವರು | : | ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕೋಲಾರ ಜಿಲ್ಲೆಯಲ್ಲಿ ಅಂತರ್ಜಲ ಕುಸಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೋಲಾರ ಜಿಲ್ಲೆಯಲ್ಲಿ ಅಂತರ್ಜಲ ಕುಸಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಕೋಲಾರ ಜಿಲ್ಲೆಯಲ್ಲಿ ಅಂತರ್ಜಲ ನಿರ್ದೇಶನಾಲಯದಿಂದ ಪ್ರತಿ ತಿಂಗಳು ಅಂತರ್ಜಲದ ಜಲಮಟ್ಟ ಮಾಪನ ಮಾಡಲಾಗುತ್ತಿದೆ. ಕೋಲಾರ ಜಿಲ್ಲೆಯಲ್ಲಿ ಒಟ್ಟು ಆರು ತಾಲ್ಲೂಕುಗಳಿದ್ದು, 10 ವರ್ಷಗಳ ಸರಾಸರಿಯಂತೆ (2012 ರಿಂದ 2021ನೇ ಸಾಲಿನ) ಅಂಕಿ ಅಂಶಗಳನ್ನು ಪರಿಶೀಲಿಸಲಾಗಿ, ಕಳೆದ 10 ವರ್ಷಗಳಿಗೆ ಹೋಲಿಸಿದಾಗ ಸ್ಥಿರ ಅಂತರ್ಜಲ ಮಟ್ಟವು ಕೆ.ಜಿ.ಎಫ್ ತಾಲ್ಲೂಕಿನಲ್ಲಿ ಏರಿಕೆ ಕಂಡುಬಂದಿದ್ದು, ಉಳಿದ ಐದು ತಾಲ್ಲೂಕಿನಲ್ಲಿ ಇಳಿಕೆ ಕಂಡುಬಂದಿರುತ್ತದೆ. ಆದರೆ ಕಳೆದ ಐದು ವರ್ಷಗಳಿಗೆ ಹೋಲಿಸಿದಾಗ ಸ್ಥಿರ ಅಂತರ್ಜಲ ಮಟ್ಟವು ಆರು ತಾಲ್ಲೂಕುಗಳಲ್ಲಿಯೂ ಏರಿಕೆ ಕಂಡುಬಂದಿರುತ್ತದೆ. ಅಂತರ್ಜಲ ಮಟ್ಟದ ವಿವರ ಈ ಕೆಳಗಿನಂತಿರುತ್ತದೆ. |

| ಕ್ರ. ಸಂ. | ತಾಲ್ಲೂಕು | 2012 | 2013 | 2014 | 2015 | 2016 | 2017 | 2018 | 2019 | 2020 | 2021 |
|---|---|---|---|---|---|---|---|---|---|---|---|
| 1 | ಕೋಲಾರ | 41.17 | 47.91 | 53.70 | 61.32 | 70.08 | 77.93 | 83.90 | 85.63 | 81.26 | 46.68 |
| 2 | ಮಾಲೂರು | 39.23 | 52.20 | 58.85 | 66.82 | 74.60 | 82.17 | 87.91 | 87.35 | 83.13 | 59.32 |
| 3 | ಶ್ರೀನಿವಾಸಪುರ | 29.32 | 39.57 | 45.84 | 54.37 | 62.75 | 69.29 | 71.90 | 74.56 | 70.51 | 51.67 |
| 4 | ಮುಳಬಾಗಿಲು | 19.67 | 31.12 | 39.31 | 44.16 | 53.40 | 60.52 | 64.89 | 70.20 | 63.59 | 29.44 |
| 5 | ಬಂಗಾರಪೇಟೆ | 28.57 | 41.57 | 47.67 | 59.07 | 68.49 | 75.12 | 80.24 | 84.15 | 78.40 | 55.10 |
| 6 | ಕೆ.ಜಿ.ಎಫ್ | 28.35 | 40.64 | 42.08 | 50.64 | 59.74 | 67.03 | 60.31 | 59.77 | 54.83 | 25.18 |

ಪ್ರಸ್ತುತ 2022ರ ಸಾಲಿನಲ್ಲಿ ಹಿಂಗಾರು ಮತ್ತು ಮುಂಗಾರಿನ ಮಾಹೆಗಳ ಅಂತರ್ಜಲ ಸ್ಥಿರ ಜಲಮಟ್ಟದ ವ್ಯತ್ಯಾಸದಂತೆ ಕೋಲಾರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟ ಏರಿಕೆ ಕಂಡುಬಂದಿರುತ್ತದೆ. ವಿವರ ಈ ಕೆಳಗಿನಂತಿರುತ್ತದೆ.

| ಕ್ರ.ಸಂ. | ತಾಲ್ಲೂಕು | ಮೇ-22 | ನವೆಂಬರ್-22 | ಏರಿಕೆ | ಇಳಿಕೆ |
|---|---|---|---|---|---|
| 1 | ಬಂಗಾರಪೇಟೆ | 21.94 | 13.40 | 8.54 | |
| 2 | ಕೋಲಾರ | 18.32 | 8.42 | 9.9 | |
| 3 | ಮಾಲೂರು | 53.32 | 31.68 | 21.64 | |
| 4 | ಮುಳಬಾಗಿಲು | 13.09 | 6.16 | 6.93 | |
| 5 | ಶ್ರೀನಿವಾಸಪುರ | 32.14 | 20.68 | 11.46 | |
| 6 | ಕೆ.ಜಿ.ಎಫ್ | 9.43 | 6.42 | 3.01 | |

| | | |
|---|---|---|
| ಆ | ಬಂದಿದ್ದಲ್ಲಿ, ಕುಸಿಯುತ್ತಿರುವ ಅಂತರ್ಜಲವನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳಾವುವು; | ಕೋಲಾರ ಜಿಲ್ಲೆಯಲ್ಲಿ ಕುಸಿಯುತ್ತಿರುವ ಅಂತರ್ಜಲವನ್ನು ಅಭಿವೃದ್ಧಿಪಡಿಸಲು ಅಂತರ್ಜಲ ಅಭಿವೃದ್ಧಿ, ಸದ್ಬಳಕೆ ಮತ್ತು ಸಂರಕ್ಷಣೆ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಲುವಾಗಿ ತಾಲ್ಲೂಕು / ಶಾಲಾ ಕಾಲೇಜು ಮಟ್ಟದಲ್ಲಿ ಜನ ಜಾಗೃತಿ ಶಿಬಿರಗಳನ್ನು ಆಯೋಜಿಸುವುದು, ಪಿಡಿಓ ಮತ್ತು ಇತರೆ ಲೈನ್ ಇಲಾಖೆಯ ಅಧಿಕಾರಿಗಳಿಗೆ ಕಾರ್ಯಗಾರವನ್ನು ಆಯೋಜಿಸುವುದು ಮತ್ತು ಹೋರ್ಡಿಂಗ್ಸ್‌ಗಳನ್ನು ಅಳವಡಿಸುವುದು ಹಾಗೂ ಮಾಧ್ಯಮಗಳ ಮೂಲಕ ಪ್ರಚಾರಗಳನ್ನು ಕೈಗೊಳ್ಳುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ ಹಾಗೂ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಚೆಕ್ ಡ್ಯಾಂ, ಇಂಗುಕೆರೆ ನಿರ್ಮಾಣ, ಬಿ.ಸಿ.ಬಿ. ನಿರ್ಮಾಣ ಹಾಗೂ ಕೆರೆಗಳನ್ನು ತುಂಬಿಸಿ ಅಂತರ್ಜಲ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ವಿಶೇಷವಾಗಿ ಕೋಲಾರ ಜಿಲ್ಲೆಯಲ್ಲಿ ಅಂತರ್ಜಲ ಅಭಿವೃದ್ಧಿಪಡಿಸಲು ಬೆಂಗಳೂರು ನಗರ 2ನೇ ಹಂತದಲ್ಲಿ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಕೆರೆಗಳಿಗೆ ಹರಿಸಿ ಅಂತರ್ಜಲ ಮಟ್ಟ ವೃದ್ಧಿಗಾಗಿ ಕೆಸಿ ವ್ಯಾಲಿ ಯೋಜನೆಯನ್ನು ಅನುಷ್ಠಾನಗೊಳಿಸಿದೆ. |
| ಇ | ಅಂತರ್ಜಲ ಮಟ್ಟದ ವಿವಿಧ ಯೋಜನೆಗಳಿಗಾಗಿ ಸರ್ಕಾರವು ಮೀಸಲಿರಿಸಿರುವ ಅನುದಾನವೆಷ್ಟು; ಈ ಯೋಜನೆಯ ಅನುಷ್ಠಾನಕ್ಕೆ ಸರ್ಕಾರ ತೆಗೆದುಕೊಂಡ ಕ್ರಮವೇನು; | ಅಂತರ್ಜಲ ಮಟ್ಟ ಅಭಿವೃದ್ಧಿಗಾಗಿ ಸಣ್ಣ ನೀರಾವರಿ ಇಲಾಖೆಯಡಿ ಕೆರೆಗಳ ನಿರ್ಮಾಣ, ಅಣೆಕಟ್ಟು, ನಿರ್ಮಾಣ, ಚೆಕ್‌ಡ್ಯಾಂ, ಬ್ರಿಡ್ಜ್ ಕಂ ಬ್ಯಾರೇಜ್, ನಿರ್ಮಾಣ ಮತ್ತು ಏತ ನೀರಾವರಿ ಯೋಜನೆಗಳ ಮೂಲಕ ಕೆರೆ ತುಂಬಿಸುವ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು, ಈ ಕಾಮಗಾರಿಗಳಿಗೆ ಪ್ರತಿ ವರ್ಷ ಇಲಾಖೆಗೆ ಒದಗಿಸಲಾಗುವ ಅನುದಾನದ ಲಭ್ಯತೆನುಸಾರ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. |
| ಈ | ಸಣ್ಣ ನೀರಾವರಿ ಯೋಜನೆಗಳಿಂದ ಜಲಸಂಪನ್ಮೂಲಗಳ ಅಭಿವೃದ್ಧಿ ಹಾಗೂ ರೈತಾಪಿ ವರ್ಗದವರಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸಿಕೊಡುವಲ್ಲಿ ಸರ್ಕಾರದ ಕ್ರಮಗಳು ಯಾವುವು? | .ಸಣ್ಣ ನೀರಾವರಿ ಇಲಾಖೆಯು ಕೆರೆಗಳು, ಇಂಗು ಕೆರೆಗಳ ನಿರ್ಮಾಣ, ಚೆಕ್‌ಡ್ಯಾಂ, ಅಣೆಕಟ್ಟು ನಿರ್ಮಾಣ ಕಾಮಗಾರಿಗಳನ್ನು ಕೈಗೊಂಡು ನೀರು ಶೇಖರಿಸಿ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಕಲ್ಪಸಲು ಕ್ರಮಕೈಗೊಂಡಿರುತ್ತದೆ. ಅಲ್ಲದೇ, ಸದರಿ ಕಾಮಗಾರಿಗಳನ್ನು ಕೈಗೊಳ್ಳುವುದರಿಂದ, ಪರೋಕ್ಷವಾಗಿ ಅಂತರ್ಜಲ ಅಭಿವೃದ್ಧಿ ಹೊಂದಿ ಕೃಷಿಗೆ ಅನುಕೂಲವಾಗುವುದು. |

ಸಂಖ್ಯೆ:ಎಂಐಡಿ 180 ಎಲ್‌ಸಿಕ್ಯೂ 2022

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು
ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು